**ಕರ್ನಾಟಕ ಸರ್ಕಾರ**

ಸಂಖ್ಯೆ : ಇಡಿ 158 ಪಿಜಿಸಿ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:12.03.2019

ಇಂದ :

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ,
ಬೆಂಗಳೂರು.

ಇವರಿಗೆ:

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ : ಆರ್.ಟಿ.ಇ ಅಡಿ ದಾಖಲಾದ ಮಕ್ಕಳಿಗೆ ಪ್ರವೇಶ ಶುಲ್ಕ ಮರುಪಾವತಿ ಮಾಡುವ ಬಗ್ಗೆ

ಉಲ್ಲೇಖ : ಶ್ರೀ ಶಶಿಕುಮಾರ್.ಡಿ, ಪ್ರಧಾನ ಕಾರ್ಯದರ್ಶಿ, ಕೆ.ಎ.ಎಂ.ಎಸ್, ಬೆಂಗಳೂರು ಇವರ ಇ–ಮೇಲ್ ದಿ:27.02.2019ರ ಪ್ರತಿ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಇ–ಮೇಲ್ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಉಲ್ಲೇಖಿತ ಇ–ಮೇಲ್ ಪ್ರತಿಯಲ್ಲಿ 2018–19ನೇ ಸಾಲಿಗೆ ಖಾಸಗಿ ಶಾಲೆಗಳಲ್ಲಿ ಆರ್.ಟಿ.ಇ ಅಡಿ ದಾಖಲಾದ ಮಕ್ಕಳಿಗೆ ಶುಲ್ಕವನ್ನು ಮರುಪಾವತಿಸುವ ಕುರಿತಂತೆ ಈಗಾಗಲೇ ಸರ್ಕಾರದಿಂದ, ಆಯುಕ್ತರಿಂದ ಶುಲ್ಕ ಮರುಪಾವತಿಗೆ ಆದೇಶವನ್ನು ಹೊರಡಿಸಿದ್ದರೂ ಸಹ ಜಿಲ್ಲಾ ಕೇಂದ್ರ ಹಂತಗಳಲ್ಲಿ ಉಪ ನಿರ್ದೇಶಕರುಗಳು ಖಾಸಗಿ ಶಾಲೆಗಳಿಗೆ ಶುಲ್ಕ ಮರುಪಾವತಿ ಮಾಡದೇ ವಿಳಂಬ ಮಾಡುತ್ತಿರುವುದಾಗಿ ಮತ್ತು ಈ ಬಗ್ಗೆ ಉಪ ನಿರ್ದೇಶಕರುಗಳಿಗೆ ಶುಲ್ಕ ಮರುಪಾವತಿಯನ್ನು ಕೂಡಲೇ ಮಾಡುವಂತೆ ಸೂಚನೆ ನೀಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಅರ್ಜಿದಾರರಿಗೆ ಮಾಹಿತಿಯನ್ನು ನೀಡುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ.ಶರಣಬಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
(ಪ್ರಾಥಮಿಕ ಶಿಕ್ಷಣ)ಶಿಕ್ಷಣ ಇಲಾಖೆ

**ಪ್ರತಿಯನ್ನು :–**

**ಶ್ರೀ ಶಶಿಕುಮಾರ್.ಡಿ, ಪ್ರಧಾನ ಕಾರ್ಯದರ್ಶಿ, ಕೆ.ಎ.ಎಂ.ಎಸ್, ಬ್ಲೋಸಮ್ಸ್ ಸ್ಕೂಲ್ ಆಫಿಸ್ ಬಿಲ್ಡಿಂಗ್, 29ನೇ ಅಡ್ಡರಸ್ತೆ, ಬಗಲಗುಂಟೆ, ಬೆಂಗಳೂರು–560073.**

Scanned by CamScanner